**KARNATAKA LOKAYUKTA**

No. UPLOK-2 /DE/961/2017/ARE-16
*(Encl: Recommendation & original Report of Inquiry Officer with connected records)*

Dr.B.R.Ambedkar Veedhi,
Multi Storied Building,
Bengaluru,
dated: 23/01/2020.

**To,**

Sri.N.Manjunath Prasad IAS,
Principal Secretary to Government,
Revenue Department,
M S Building,
Bengaluru - 560001.

Respected Sir,

**Sub :** Departmental inquiry against, Sri.Thimmaiah, the then Tahsildar (Presently retired( Sandur Taluk, Bellary Dist and (2) Sri.Mahaboob Sab, Revenue Ispector, Choranur, Sandur Taluk Office, Sandur Taluk, Bellary Dist-reg.

**Ref :** Government Order No. ಆರ್‌ಡಿ 136 ಎಡಿಇ 2016 ಬೆಂಗಳೂರು ದಿನಾಂಕ : 26.07.2017

***

With Reference to the above, I am directed to forward herewith the recommendation of Hon'ble Uplokayukta, State of Karnataka, dated 23.01.2020 along with the report of inquiry Officer and relevant records as noted below:

**INDEX**

| Sl. No. | Particulars of Documents | Page Nos. |
|---|---|---|
| | Recommendation dated 23/01/2020 of Hon'ble Upalokayukta along with inquiry report | One sealed cover |
| **File 1** | Order Sheet File (Original). | 1-8 |

| | | |
|---|---|---|
| **File 2** | **Documents containing :**<br>I. 12(3) report of Hon'ble Upalokayukta-II, dated: 26/09/2016 (xerox). | 9-12 |
| | II.Government Order No. ಆರ್.ಡಿ 136 ಎಡಿಇ 2016, ಬೆಂಗಳೂರು, ದಿನಾಂಕ 26/07/2017. (xerox). | 13-15 |
| | III. Nomination order No: Uplok-2/DE/961/2017 Bengaluru, dated: 28/08/2017 of Hon'ble Upalokayukta-II, Bangalore (Xerox) | 16-17 |
| | IV. Served copy of Articles of charges dtd.9/5/2019, 5 pages (Original) | 18-24 |
| | V. First Oral Statement of DGO-1 dtd:14/6/2019,(original) | 25 |
| | VI. First Oral Statement of DGO-2 dtd:14/6/2019,(original) | 26 |
| | VII. Written statement of DGO-1 dt.31/7/2019, pages (original) | 27-28 |
| | VIII. Written statement of DGO-2 dt.31/7/2019, (original) | 29-30 |
| | IX. Second oral statement of DGO-2 dt.04/12/2019, (original) | 31 |
| | X. Written arguments of DGO-2,dt.16/1/2020 (original) | 32-33 |
| **File 3** | **Witness examined on behalf of the Disciplinary Authority** | |
| | **PW-1**: Sri.B.M.Ujjaniah, dt.1/10/2019 (original) | 34-37 |
| | **Documents marked on behalf Disciplinary Authority (Ex.P1 to Ex.P.24)** | |
| | **Ex.P-1:** Complaint of Sri. Sri.B.M.Ujjaniah (original) | 38-39 |
| | **Ex.P-2:** Complaint of Sri.B.M.Ujjaniah in form No.I, dt.13/2/2015 (original) | 40-41 |
| | **Ex.P-3:** Complaint of Sri.B.M.Ujjaniah in form No.II dt.13/2/2015 (original) | 42 |
| | **Ex.P-4:** Copy of letter of complainant to Tahsildar, Sandur dt.19/9/2014 (Xerox) | 43 |
| | **Ex.P-5:** Copy of letter of village accountant to Tahsildar, Sandur(Xerox) | 44 |
| | **Ex.P-6**: Copy of letter of Revenue Inspector to Tahsildar, Sandur (Xerox) | 45 |

| | | |
|---|---|---|
| | **Ex.P.7:** Copy of letter of Tahsildar, Sandur addressed to Police sub Inspector, Gudekote Police station dt.30/09/2014 (Xerox) | 46 |
| | **Ex.P.8:** Copy of letter of complainant Ujjaniah to Assistant Commissioner, Bellary (Xerox) | 47 |
| | **Ex.P.9**: Copy of letter of complainant Ujjanaih to Asst.Commissioner, Bellary dt.30/10/2014(Xerox) | 48 |
| | **Ex.P.10**: Copy of letter of Assistant Commissioner to Tahsildar, Sandur Dt:12/12/2014 (Xerox) | 49 |
| | **Ex.P.11:** Copy of proceedings of Tahsildar, Sandur dt:22/12/2014 ( Xerox) | 50 |
| | **Ex.P.12:** Copy of sketch (Xerox) | 51 |
| | **Ex.P.13 and 14:** Copy of photographs (original)) | 52 |
| | **Ex.P.15**: Copy of letter of complainant, Ujjanaiah dt.19/3/2015 addressed to Karnataka Lokayukta(original) | 53 |
| | **Ex.P.16: O**ne original CD | 54 |
| | **Ex.P.17: C**opy of letter of complainant, Ujjanaiah dt.27/7/2015 to Karnataka Lokayukta(original) | 55-57 |
| | **Ex.P.18 to 21:**Copy of mutation registers (original) | 58-61 |
| | **Ex.P.22**: Copy of records of rights (original) | 62 |
| | **Ex.P.23:** Copy of memo of Tahsildar, Sandur(xerox) | 63 |
| | **Ex.P.24:** Copy of Slip of Taluk General Hospital, Sandur (xerox) | 64 |
| **File 4** | **Witness examined on behalf of the DGO** | |
| | **DW-1:** Sri. Mehaboob Sab dt.7/1/2020, (Original) | 65-67 |

Kindly acknowledge the receipt of the above said documents.

Yours faithfully,

(B.V.Patil)
Registrar,
Karnataka Lokayukta,
Bengaluru.

Copy to the Addl.Registrar of Enquiries-16, Karnataka Lokayukta, Bengaluru., for information and further necessary action.

KARNATAKA LOKAYUKTA

No. UPLOK-2/DE/961/2017/ARE-16

Multi-storeyed Building,
Dr.B.R. Ambedkar Veedhi,
Bengaluru, dt.23.1.2020.

## RECOMMENDATION

Sub: Departmental Enquiry against Sri. Thimmaiah, the then Tahasildar(Presently retired), Sanduru Taluk, Bellary District and (2) Sri. Mahaboob Sab, Revenue Inspector, Choranuru, Sanduru Taluk Office, Sanduru Taluk, Bellary District-reg.

Ref: 1. Govt. Order No. ಆರ್‌ಡಿ 136 ಐಡಿಇ 2016, Bengaluru, dated 26.7.2017.
2. Nomination Order No:Uplok-2/DE/961/2017. of Hon'ble Upalokayukta-2, Bengaluru, dated 28.8.2017.
3. Report of ARE-16, KLA, Bengaluru, dated 21.1.2020.

~~~~~~~

Government, by order dt. 26.7.2017, initiated the disciplinary proceedings against Sri. Thimmaiah, the then Tahasildar(Presently retired), Sanduru Taluk, Bellary District and (2) Sri. Mahaboob Sab, Revenue Inspector, Choranuru, Sanduru Taluk Office, Sanduru Taluk, Bellary District [hereinafter referred to as the Delinquent Government Officials, for short 'DGOs'] and entrusted the departmental inquiry to this Institution.

2. This Institution, by Nomination Order dated 28.8.2017 nominated Additional Registrar of Enquiries-11, Karnataka Lokayukta, Bengaluru, to conduct departmental inquiry against the DGOs for the alleged misconduct said to have been committed by them. Subsequently by order No. Uplok-1 & 2/DE/Transfers/2019, Bengaluru dated 7.2.2019 ARE-16 was re-nominated to continue the said enquiry.

3. The charge framed against the DGOs, Sri. Thimmaiah, the then Tahasildar (Presently retired), Sanduru Taluk, Bellary District and (2) Sri. Mahaboob Sab,
~~~~~~~

Revenue Inspector, Choranuru, Sanduru Taluk Office, Sanduru Taluk, Bellary District, is as follows;

"1ನೇ ಸರ್ಕಾರಿ ಆಪಾದಿತ ನೌಕರರಾದ ಶ್ರೀ ತಿಮ್ಮಯ್ಯ, ಹಿಂದಿನ ತಹಶೀಲ್ದಾರ್, ಸಂಡೂರು (ಪ್ರಸ್ತುತ ನಿವೃತ್ತ) ಮತ್ತು 2ನೇ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಮಹಬೂಬ್ ಸಾಬ್, ಕಂದಾಯ ನಿರೀಕ್ಷಕರು, ಚೋರನೂರು ಆದ ನೀವು ಬಳ್ಳಾರಿ ಜಿಲ್ಲೆ, ಬೊಮ್ಮಗಟ್ಟ ಗ್ರಾಮದಲ್ಲಿರುವ ರಸ್ತೆಯನ್ನು ಹಾಗೂ ಸರ್ಕಾರಿ ಪ್ರೌಢಶಾಲೆಯ ಜಾಗವನ್ನು ಡಾ।। ಪ್ರಸನ್ನ ಮತ್ತು ಡಾ।।ನಿಂಗಪ್ಪ ಇವರು ಒತ್ತುವರಿ ಮಾಡಿದ್ದು, ದೂರುದಾರರು ದಿ: 19/09/2014 ರಂದು ಸದರಿ ಒತ್ತುವರಿಯನ್ನು ಬಿಡಿಸಿಕೊಡುವಂತೆ 1ನೇ ಆ.ಸ.ನೌ. ಆದ ನಿಮಗೆ ಮನವಿ ಸಲ್ಲಿಸಿದ್ದು, 2ನೇ ಆ.ಸ.ನೌ. ಆದ ಚೋರನೂರು ಕಂದಾಯ ನಿರೀಕ್ಷಕರು ಮತ್ತು ತಾಲ್ಲೂಕು ಮೋಜಣಿದಾರರಿಗೆ ಸ್ಥಳ ತನಿಖೆ ಮಾಡಿ ವರದಿ ಸಲ್ಲಿಸುವಂತೆ ತಿಳಿಸಿರುತ್ತೀರಿ. 2ನೇ ಆ.ಸ.ನೌಕರರಾದ ನೀವು ಮತ್ತು ತಾಲ್ಲೂಕು ಮೋಜಣಿದಾರರು ಸ್ಥಳ ತನಿಖೆಯನ್ನು ದಿ: 27.09.2014 ರಂದು ನಡೆಸಿ ರಸ್ತೆ ಒತ್ತುವರಿಯಾಗಿರುವ ಬಗ್ಗೆ ವರದಿ ಸಲ್ಲಿಸಿರುತ್ತೀರಿ. ಅದರಂತೆ 1ನೇ ಆ.ಸ.ನೌಕರರಾದ ನೀವು ದಿ: 30.09.2014 ರಂದು ಸರ್ಕಾರಿ ರಸ್ತೆಯಲ್ಲಿ ಕಟ್ಟಿರುವ ಕಾಂಪೌಂಡನ್ನು ತೆರವುಗೊಳಿಸಲು ಆದೇಶಿಸಿದ್ದು, ಆದರೆ 1 ಮತ್ತು 2ನೇ ಆ.ಸ.ನೌಕರರಾದ ನೀವು ಇದುವರೆಗೂ ಯಾವುದೇ ರೀತಿಯ ಕ್ರಮಕೈಗೊಳ್ಳದೆ ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3(1)(ii) & (iii) ರಡಿಯಲ್ಲಿ ಕರ್ತವ್ಯಲೋಪವನ್ನೆಸಗಿರುತ್ತೀರಿ".

4. The Inquiry Officer (Additional Registrar of Enquiries-16) on proper appreciation of oral and documentary evidence has held that, 'the Disciplinary Authority has 'proved' the charge levelled against the DGO No.1 Sri. Thimmaiah, the then Tahasildar(Presently retired), Sanduru Taluk, Bellary District and (2) Sri. Mahaboob Sab, Revenue Inspector, Choranuru, Sanduru Taluk Office, Sanduru Taluk, Bellary District.

5. On re-consideration of report of inquiry and all the records, I do not find any reason to interfere with the findings recorded by the Inquiry Officer.

Therefore, it is hereby recommended to the Government to accept the report of Inquiry Officer.

6. As per the First Oral Statement of DGOs furnished by the Inquiry Officer, Sri. Thimmaiah, the then Tahasildar (Presently retired), Sanduru Taluk, Bellary District and (2) Sri. Mahaboob Sab, Revenue Inspector, Choranuru, Sanduru Taluk Office, Sanduru Taluk, Bellary District, retired from service on 30.6.2015 and 30.4.2016 respectively.

7. Having regard to the nature of charge 'proved' against DGO No. 1 – Sri. Thimmaiah, the then Tahasildar (Presently retired), Sanduru Taluk, Bellary District and (2) Sri. Mahaboob Sab, Revenue Inspector, Choranuru, Sanduru Taluk Office, Sanduru Taluk, Bellary District, on consideration of the totality of circumstances-,

> 'it is hereby recommended to the Government to impose penalty of Withholding (Ten) 10 % of the pension payable to DGOs 1 & 2 i.e., ' Sri. Thimmaiah, the then Tahasildar (Presently retired), Sanduru Taluk, Bellary District and (2) Sri. Mahaboob Sab, Revenue Inspector,(Since retired) Choranuru, Sanduru Taluk Office, Sanduru Taluk, Bellary District, for a period of five years'.

8. Action taken in the matter shall be intimated to this Authority.

Connected records are enclosed herewith.

Sd/- 23-1-20

**(JUSTICE B.S.PATIL)**
Upalokayukta-2,
State of Karnataka.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ-961/2017/ಎ.ಆರ್.ಇ-16

ಡಾ:ಬಿ.ಆರ್.ಅಂಬೇಡ್ಕರ್ ವೀದಿ
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 21/01/2020.

## ವಿಚಾರಣಾ ವರದಿ

**ಉಪಸ್ಥಿತರು:** ಸೆಲ್ವಕುಮಾರ್.ಸಿ, ಅಪರ ನಿಬಂಧಕರು ವಿಚಾರಣೆಗಳು-16,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

ವಿಷಯ: 1) **ಶ್ರೀ ತಿಮ್ಮಯ್ಯ,** ತಹಶೀಲ್ದಾರ್, ಸಂಡೂರು ಹಾಗೂ 2) **ಶ್ರೀ ಮಹಬೂಬ್** ಸಾಬ್, ಕಂದಾಯ ನಿರೀಕ್ಷಕರು, ಚೋರನೂರು, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:** 1. ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ-644/2015/ಡಿ.ಆರ್.ಇ-5 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 26/09/2016.

2. ಸರ್ಕಾರದ ಆದೇಶ ಸಂಖ್ಯೆ: ಆರ್.ಡಿ 136 ಎಡಿಇ 2016, ಬೆಂಗಳೂರು, ದಿನಾಂಕ 26/07/2017.

3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ/961/2017, ಬೆಂಗಳೂರು ದಿನಾಂಕ: 28/08/2017.

4. Note No.Uplok-1 & 2/DE/Transfers/ 2019, dated 07.02.2019.

* * * * *

ಈ ದೂರನ್ನು, ದೂರುದಾರರಾದ ಶ್ರೀ ಬಿ.ಎಂ. ಉಜ್ಜಿನಯ್ಯ ಬಿನ್ ಬಿ.ಎಂ.ಷಣ್ಮುಖಯ್ಯ, ಲಕ್ಷ್ಮೀಪುರ ವಾಸಿ, ಸಂಡೂರು ತಾಲ್ಲೂಕುರವರು ಆಪಾದಿತ ಸರ್ಕಾರಿ ನೌಕರರಾದ 1) ಶ್ರೀ ತಿಮ್ಮಯ್ಯ, ತಹಶೀಲ್ದಾರ್, ಸಂಡೂರು ಹಾಗೂ 2) ಶ್ರೀ ಮಹಬೂಬ್ ಸಾಬ್, ಕಂದಾಯ ನಿರೀಕ್ಷಕರು, ಚೋರನೂರು, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ (ಇನ್ನು ಮುಂದೆ ಆ.ಸ.ನೌ ಎಂದು ಸಂಭೋದಿಸಲ್ಪಡುತ್ತಾರೆ) ರವರುಗಳ ವಿರುದ್ಧ ಕರ್ತವ್ಯ ಲೋಪ ಮತ್ತು ದುರ್ನಡತೆಯಿಂದ ವರ್ತಿಸಿರುವುದಾಗಿ ಆಪಾದಿಸಿ ದೂರು ದಾಖಲಿಸಿರುತ್ತಾರೆ.

2) ತನಿಖೆ ಪೂರ್ಣಗೊಂಡ ನಂತರ ಸರ್ಕಾರಕ್ಕೆ, ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3) ಅಡಿಯಲ್ಲಿ, ಉಲ್ಲೇಖ(1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದಾಗಿ, ಸದರಿ ವರದಿ ಅನ್ವಯ ಕರ್ನಾಟಕ ಸರ್ಕಾರವು ಆದೇಶ ದಿನಾಂಕ 26/07/2017ರಂದು ಮಾನ್ಯ ಉಪಲೋಕಾಯುಕ್ತ–2ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ, ನಾಮ ನಿರ್ದೇಶನವನ್ನು ನೀಡಿದ್ದು, ಅದರಂತೆ ಮಾನ್ಯ ಉಪಲೋಕಾಯುಕ್ತ–2ರವರು ದಿನಾಂಕ 28/08/2017ರಂದು ಅಪರ ನಿಬಂಧಕರು, ವಿಚಾರಣೆಗಳು–11ರವರಿಗೆ ವಿಚಾರಣೆ ಮಾಡಿ ವರದಿಯನ್ನು ಉಲ್ಲೇಖ (3)ರಲ್ಲಿ ಕಾಣಿಸಿದಂತೆ ಶಿಫಾರಸ್ಸು ಮಾಡಿದ್ದು, ಉಲ್ಲೇಖ (4)ರಂತೆ ಅಪರ ನಿಬಂಧಕರು, ವಿಚಾರಣೆಗಳು–11ರವರಿಂದ ಈ ವಿಚಾರಣಾ ಪ್ರಾಧಿಕಾರವಾದ ಅಪರ ನಿಬಂಧಕರು, ವಿಚಾರಣೆಗಳು–16ಕ್ಕೆ ವರ್ಗಾವಣೆಗೊಂಡಿರುತ್ತದೆ.

3) ನಾಮ ನಿರ್ದೇಶನದ ಆದೇಶದಂತೆ, ಆ.ಸ.ನೌರವರುಗಳ ವಿರುದ್ಧ ದೋಷರೋಪಣೆ (Article of charges) ಅನ್ನು ಅಪರ ನಿಬಂಧಕರು, ವಿಚಾರಣೆಗಳು–11ರವರು ರಚಿಸಿದ್ದು, ಸದರಿ ದೋಷಾರೋಪಣೆ ಅನುಬಂಧ–1 ಮತ್ತು ಅನುಬಂಧ–2ರೊಂದಿಗೆ ದುರ್ನಡತೆ ಮತ್ತು ಕರ್ತವ್ಯ ಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರುಗಳಿಗೆ ದಿನಾಂಕ 09/05/2019ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## <u>ಅನುಬಂಧ–1</u>

## <u>ದೋಷಾರೋಪಣೆ</u>

4) 1ನೇ ಸರ್ಕಾರಿ ಆಪಾದಿತ ನೌಕರರಾದ ಶ್ರೀ ತಿಮ್ಮಯ್ಯ, ಹಿಂದಿನ ತಹಶೀಲ್ದಾರ್, ಸಂಡೂರು (ಪ್ರಸ್ತುತ ನಿವೃತ್ತ) ಮತ್ತು 2ನೇ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಮಹಬೂಬ್ ಸಾಬ್, ಕಂದಾಯ ನಿರೀಕ್ಷಕರು, ಚೋರನೂರು ಆದ ನೀವು ಬಳ್ಳಾರಿ ಜಿಲ್ಲೆ, ಬೊಮ್ಮಗಟ್ಟ ಗ್ರಾಮದಲ್ಲಿರುವ ರಸ್ತೆಯನ್ನು ಹಾಗೂ ಸರ್ಕಾರಿ ಪ್ರೌಢಶಾಲೆಯ ಜಾಗವನ್ನು ಡಾ॥ ಪ್ರಸನ್ನ ಮತ್ತು ಡಾ॥ನಿಂಗಪ್ಪ ಇವರು ಒತ್ತುವರಿ ಮಾಡಿದ್ದು, ದೂರುದಾರರು ದಿ: 19/09/2014 ರಂದು ಸದರಿ ಒತ್ತುವರಿಯನ್ನು ಬಿಡಿಸಿಕೊಡುವಂತೆ 1ನೇ ಆ.ಸ.ನೌ. ಆದ ನಿಮಗೆ ಮನವಿ ಸಲ್ಲಿಸಿದ್ದು, 2ನೇ ಆ.ಸ.ನೌ. ಆದ ಚೋರನೂರು ಕಂದಾಯ ನಿರೀಕ್ಷಕರು ಮತ್ತು ತಾಲ್ಲೂಕು ಮೋಜಣಿದಾರರಿಗೆ

ಸ್ಥಳ ತನಿಖೆ ಮಾಡಿ ವರದಿ ಸಲ್ಲಿಸುವಂತೆ ತಿಳಿಸಿರುತ್ತೀರಿ. 2ನೇ ಆ.ಸ.ನೌಕರರಾದ ನೀವು ಮತ್ತು ತಾಲ್ಲೂಕು ಮೋಜಣಿದಾರರು ಸ್ಥಳ ತನಿಖೆಯನ್ನು ದಿ: 27.09.2014 ರಂದು ನಡೆಸಿ ರಸ್ತೆ ಒತ್ತುವರಿಯಾಗಿರುವ ಬಗ್ಗೆ ವರದಿ ಸಲ್ಲಿಸಿರುತ್ತೀರಿ. ಅದರಂತೆ 1ನೇ ಆ.ಸ.ನೌಕರರಾದ ನೀವು ದಿ: 30.09.2014 ರಂದು ಸರ್ಕಾರಿ ರಸ್ತೆಯಲ್ಲಿ ಕಟ್ಟಿರುವ ಕಾಂಪೌಂಡನ್ನು ತೆರವುಗೊಳಿಸಲು ಆದೇಶಿಸಿದ್ದು, ಆದರೆ 1 ಮತ್ತು 2ನೇ ಆ.ಸ.ನೌಕರರಾದ ನೀವು ಇದುವರೆಗೂ ಯಾವುದೇ ರೀತಿಯ ಕ್ರಮಕೈಗೊಳ್ಳದೆ ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3(1)(ii) & (iii) ರಡಿಯಲ್ಲಿ ಕರ್ತವ್ಯಲೋಪವನ್ನೆಸಗಿರುತ್ತೀರಿ.

## ಅನುಬಂಧ-2

## ದೋಷಾರೋಪಣೆಯ ವಿವರ

5) ದೂರುದಾರರು ತಮ್ಮ ದೂರಿನಲ್ಲಿ ಬಳ್ಳಾರಿ ಜಿಲ್ಲೆ, ಬೊಮ್ಮಗಟ್ಟ ಗ್ರಾಮದಲ್ಲಿರುವ ರಸ್ತೆಯನ್ನು ಹಾಗೂ ಸರ್ಕಾರಿ ಪ್ರೌಢಶಾಲೆಯ ಜಾಗವನ್ನು ಡಾ:ಪ್ರಸನ್ನ ಮತ್ತು ಡಾ:ನಿಂಗಪ್ಪ, ಇವರು ಒತ್ತುವರಿ ಮಾಡಿದ್ದು, ದೂರುದಾರರು ದಿ: 19.09.2014 ರಂದು ಸದರಿ ಒತ್ತುವರಿಯನ್ನು ಬಿಡಿಸಿಕೊಡುವಂತೆ 1ನೇ ಆ.ಸ.ನೌಕರರಿಗೆ ಮನವಿ ಸಲ್ಲಿಸಿದ್ದು, 1ನೇ ಆ.ಸ.ನೌಕರರು ಚೋರನೂರು ಕಂದಾಯ ನಿರೀಕ್ಷಕರು ಮತ್ತು ತಾಲ್ಲೂಕು ಮೋಜಣಿದಾರರಿಗೆ ಸ್ಥಳ ತನಿಖೆ ಮಾಡಿ ವರದಿ ಸಲ್ಲಿಸಲು ತಿಳಿಸಲಾಗಿ, ಕಂದಾಯ ನಿರೀಕ್ಷಕರು ಮತ್ತು ತಾಲ್ಲೂಕು ಮೋಜಣಿದಾರರಿಗೆ ಸ್ಥಳ ತನಿಖೆ ಮಾಡಿ ವರದಿ ಸಲ್ಲಿಸಲು ತಿಳಿಸಲಾಗಿ, ಕಂದಾಯ ನಿರೀಕ್ಷಕರು ಮತ್ತು ತಾಲ್ಲೂಕು ಮೋಜಣಿದಾರರು ದಿನಾಂಕ: 27.09.2014 ರಂದು ಸ್ಥಳ ತನಿಖೆಯನ್ನು ನಡೆಸಿ, ರಸ್ತೆ ಒತ್ತುವರಿಯಾಗಿರುವ ಬಗ್ಗೆ ವರದಿ ಸಲ್ಲಿಸಿದ್ದಾರೆ. ಅದರಂತೆ, ತಹಶೀಲ್ದಾರರು ದಿ: 30.09.2014 ರಂದು ಸರ್ಕಾರಿ ರಸ್ತೆಯಲ್ಲಿ ಕಟ್ಟಿರುವ ಕಾಂಪೌಂಡನ್ನು ತೆರವುಗೊಳಿಸಲು ಆದೇಶಿಸಿದ್ದಾರೆ. ಆದರೆ ಸದರಿ ಆದೇಶದಂತೆ ಒತ್ತುವರಿಯನ್ನು ಇದುವರೆಗೂ ತೆರವುಗೊಳಿಸಿರುವುದಿಲ್ಲ. ಸಹಾಯಕ ಆಯುಕ್ತರಿಗೂ ಹಲವಾರು ಸಲ ಮೌಖಿಕವಾಗಿ, ಖುದ್ದಾಗಿ ಮನವಿ ಮಾಡಿದ್ದರೂ ಪರಿಗಣಿಸಿರುವುದಿಲ್ಲ. ಆದ್ದರಿಂದ

ಸಹಾಯಕ ಆಯುಕ್ತರು ದಿ.12.12.2014 ರಂದು ಸ್ಥಿರ ಕಾಲಮಿತಿಯಲ್ಲಿ ಆದೇಶ ಹೊರಡಿಸಲು ಸೂಚಿಸಿದ್ದಾರೆ. ಆ.ಸ.ನೌಕರರು ಮರು ಆದೇಶ ಮಾಡಿ ರಸ್ತೆಯನ್ನು ಬಿಡಿಸಿಕೊಡುವುದಾಗಿ ಹೇಳಿದ್ದರೂ, ಶಾಸಕರಾದ ಶ್ರೀ ತುಕಾರಾಂ ಇವರ ದೂರವಾಣಿ ಕರೆಯ ಮೇರೆಗೆ ಕಂದಾಯ ನಿರೀಕ್ಷಕರು ದಾರಿ ಬಿಡಿಸಲು ಸಾಧ್ಯವಿಲ್ಲವೆಂದು ತಿಳಿಸಿರುವುದರಿಂದ, ಸರ್ಕಾರಿ ರಸ್ತೆ ಹಾಗೂ ಶಾಲೆಯ ಜಾಗ ಬಿಡಿಸಿಕೊಡಲು ಕೋರಿದ್ದಾರೆ. 1ನೇ ಆ.ಸ.ನೌಕರರ ಆದೇಶದ ಪ್ರತಿ, ಕಂದಾಯ ನಿರೀಕ್ಷಕರು ಕೊಟ್ಟಿರುವ ಆದೇಶದ ಪ್ರತಿ, ಸರ್ವೆ ಕಂದಾಯ ನಕ್ಷೆ, ಸಹಾಯಕ ಆಯುಕ್ತರ ಆದೇಶದ ಪ್ರತಿಗಳನ್ನು ಸಲ್ಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

6) ಸದರಿ ದೂರಿನ ಮೇಲೆ 1 ಮತ್ತು 2ನೇ ಆ.ಸ.ನೌಕರರಿಂದ ಆಕ್ಷೇಪಣೆಯನ್ನು ಸಲ್ಲಿಸಲು ಸೂಚಿಸಲಾಯಿತು. ಆ.ಸ.ನೌಕರರು ತಮ್ಮ ಆಕ್ಷೇಪಣೆಯಲ್ಲಿ ದೂರಿನ ಅಂಶಗಳನ್ನು ಅಲ್ಲಗಳೆದು, ಡಾ:ಪ್ರಸನ್ನ ಹಾಗೂ ಡಾ:ನಿಂಗಪ್ಪ ಇವರು ಯಾವುದೇ ಸರ್ಕಾರಿ ಜಮೀನು ಒತ್ತುವರಿ ಮಾಡಿರುವುದಿಲ್ಲ, ಯಥಾಸ್ಥಿತಿಯಲ್ಲಿ ಸರ್ಕಾರಿ ಶಾಲೆಗೆ ಮತ್ತು ಜಮೀನುಗಳಿಗೆ ಹೋಗುವ ರಸ್ತೆ ಇದ್ದು, ಇದೇ ಸರ್ವೆ ನಂ.99ರಲ್ಲಿ 3 ಎಕರೆ ಜಮೀನನ್ನು ಆಶ್ರಯ ಯೋಜನೆಯಡಿಯಲ್ಲಿ ನೀಡಲಾಗಿದ್ದು, ಇದರಲ್ಲಿ ಸಾರ್ವಜನಿಕರು ಓಡಾಡಲು ರಸ್ತೆ ಇದ್ದು, ಡಾ:ಪ್ರಸನ್ನ ಮತ್ತು ಡಾ:ನಿಂಗಪ್ಪ, ಇವರ ಪೂರ್ವಜರು 80X12 ರ ಪಟ್ಟಾ ಜಮೀನನ್ನು ರಸ್ತೆ ಸಲುವಾಗಿ ಬಿಟ್ಟುಕೊಟ್ಟಿರುತ್ತಾರೆ. ಸದರಿ ರಸ್ತೆಯು ಎಲ್ಲರಿಗೂ ಸೂಕ್ತವಾಗಿದೆ, ದೂರುದಾರರು ವೈಯಕ್ತಿಕ ಅನುಕೂಲಕ್ಕೆ ದೂರು ನೀಡಿರುತ್ತಾರೆ, ಹಾಲಿ ಆಶ್ರಯ ಕಾಲೋನಿಯಿಂದ ಕೆರೆ ಅಂಗಳದವರೆಗೆ ಬಿಡಿಸಿಕೊಟ್ಟ ರಸ್ತೆ ಸರಿಯಿದೆಯೆಂದು ತಿಳಿಸಿ ಪ್ರಕರಣವನ್ನು ಮುಕ್ತಾಯಗೊಳಿಸಲು ಕೋರಿರುತ್ತಾರೆ.

7) ಸದರಿ ವರದಿಯ ಮೇಲೆ ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ, ತಮ್ಮ ಪ್ರತ್ಯುತ್ತರದಲ್ಲಿ ತಹಶೀಲ್ದಾರರು ಸರ್ವೆ ನಂ.561 ಮತ್ತು 563ರ ಮಧ್ಯದ ರಸ್ತೆ ಎಂಬುದಾಗಿ ತಪ್ಪಾಗಿ ನಮೂದಿಸಿದ್ದು, 599 ರಲ್ಲಿನ ರಸ್ತೆಯ ಬಗ್ಗೆ ತಾನು ದೂರಿದ್ದು, ಒತ್ತುವರಿದಾರರಿಗೆ ಸರ್ವೆ ನಂ.591ರ ಜಮೀನು ಸೇರಿದೆ. ಅವರ ಪೂರ್ವಜರು ಆಶ್ರಯ ಯೋಜನೆಗೆ 3 ಎಕರೆ ಕೊಟ್ಟಿರುವುದಾಗಿ ಹೇಳಿದ್ದು, ಸರ್ವೆ ನಂ.591ರಲ್ಲಿ 4 ಎಕರೆ ವಿಸ್ತೀರ್ಣಕ್ಕೆ ಒಂದೇ ಪಹಣಿ ಬರುತ್ತದೆ. ಒಂದು ಎಕರೆ ಜಾಗವನ್ನು ಭೂಪರಿವರ್ತನೆ ಮಾಡದೆ 9 ಸೈಟುಗಳನ್ನು ಮಾಡಿ

ನೋಂದಾಯಿಸಿದ್ದಾರೆ, 18.3.2015 ರಂದು ಚೋರನೂರು ಕಂದಾಯ ನಿರೀಕ್ಷಕರು ಕೂಡ್ಲಿಗಿಗೆ ಹೋಗಿದ್ದು, ಬೊಮ್ಮಘಟ್ಟ ಗ್ರಾಮಕ್ಕೆ ಅಂದು ಬಂದಿರುವುದಿಲ್ಲ, ಸುಳ್ಳು ಮಹಜರ್ ಮತ್ತು ಹೇಳಿಕೆಗಳನ್ನು 18.3.2015 ಎಂಬುದಾಗಿ ನಮೂದಿಸಿದ್ದು, ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಸಲ್ಲಿಸಿ, ಕ್ರಮಕೈಗೊಳ್ಳುವಂತೆ ಕೋರಿದ್ದಾರೆ.

8) ಈ ಪ್ರಕರಣದಲ್ಲಿ ದೂರುದಾರರು ಹಾಗೂ ಆ.ಸ.ನೌಕರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ, ದಾಖಲೆಗಳನ್ನು ಗಮನಿಸಿದಾಗ ಕಂಡು ಬರುವ ಅಂಶಗಳೇನೆಂದರೆ, ದಿ: 30.4.2015ರಂದು ಆರಕ್ಷಕ ನಿರೀಕ್ಷಕರು, ಕೂಡ್ಲಿಗಿ ತಾಲ್ಲೂಕು ಇವರಿಗೆ 1ನೇ ಆ.ಸ.ನೌಕರರು ಒಂದು ಆದೇಶ ಕಳುಹಿಸಿದ್ದು, ಸ.ನಂ.591ರಲ್ಲಿ ನಕಾಶೆಯಲ್ಲಿ ರಸ್ತೆ ಇರುತ್ತದೆ, 2ನೇ ಆ.ಸ.ನೌಕರರು ಮತ್ತು ಮೋಜಣಿದಾರರು ಜಂಟಿಯಾಗಿ ಪರಿಶೀಲಿಸಿದಾಗ ಹಾಲಿ ನಕಾಶೆಯಲ್ಲಿ ರಸ್ತೆ ಇರುತ್ತದೆ, ಆದುದರಿಂದ ಆ ರಸ್ತೆಯಲ್ಲಿ ಕಟ್ಟಿರುವ ಕಾಂಪೌಂಡನ್ನು ತೆರವುಗೊಳಿಸಲು ಆದೇಶಿಸಿದ್ದಾರೆ. ಸಹಾಯಕ ಆಯುಕ್ತರು ದಿ: 12.12.2014 ರಂದು 1ನೇ ಆ.ಸ.ನೌಕರರಿಗೆ ಆದೇಶಿಸಿ, ಸಂಡೂರು ತಾಲ್ಲೂಕಿನ ಚೋರನೂರು ಹೋಬಳಿ ಬೊಮ್ಮಘಟ್ಟ ಗ್ರಾಮದ ಸರ್ವೆ ನಂ.591 ರಲ್ಲಿ ನಕಾಶೆ ಕಂಡ ಸರ್ಕಾರಿ ದಾರಿಯಿದ್ದು, ಅದನ್ನು ಖಾತೆದಾರರು ಮುಚ್ಚಿದ್ದು, ಸಾರ್ವಜನಿಕರಿಗೆ ಅನುಕೂಲವಾಗುವಂತೆ ತೆರವುಗೊಳಿಸಿ ಮುಕ್ತವನ್ನಾಗಿಸಲು ಆದೇಶಿಸಿದ್ದರೂ ಸಹಾ 1ನೇ ಮತ್ತು 2ನೇ ಆ.ಸ.ನೌಕರರು ಯಾವುದೇ ರೀತಿಯ ಕ್ರಮ ಕೈಗೊಂಡಿಲ್ಲ ಎನ್ನುವುದು ದಾಖಲೆಗಳಿಂದ ತಿಳಿದು ಬರುತ್ತದೆ.

9) ಈ ಸಂಸ್ಥೆಯಿಂದ ಆಕ್ಷೇಪಣೆ ಕೇಳಲಾಗಿ, ಹೊಸದಾಗಿ ಸರ್ವೆ ನಂ.591 ರಲ್ಲಿ 3 ಎಕರೆಯನ್ನು ಡಾ: ಪ್ರಸನ್ನ ಇವರ ಪೂರ್ವಜರು ಆಶ್ರಯ ಯೋಜನೆಗೆ ಕೊಟ್ಟಿದ್ದಾರೆ, ತಮ್ಮದೇ ಜಮೀನಿನಲ್ಲಿ ಬೇರೊಂದು ದಾರಿಯನ್ನು ಕೊಟ್ಟಿದ್ದಾರೆ ಎಂಬುದಾಗಿ ತಿಳಿಸಿರುತ್ತಾರೆ. ತಾವು ಈಗಾಗಲೇ ಮಾಡಿದ ಆದೇಶಕ್ಕೆ ವಿರುದ್ಧವಾಗಿ ಅರ್ಜಿದಾರರಿಗೆ ಬೇರೊಂದು ರಸ್ತೆಯಿದೆ, ಎಲ್ಲಾ ಸಾರ್ವಜನಿಕರು ಅದನ್ನು ಬಳಸುತ್ತಿದ್ದಾರೆಂದು ತಿಳಿಸಿದ್ದಾರೆಯೇ ಹೊರತು 1ನೇ ಆ.ಸ.ನೌಕರರು ಹೊರಡಿಸಿದ ಆದೇಶವನ್ನು ಏಕೆ ಪರಿಪಾಲನೆ ಮಾಡಿಲ್ಲ ಎನ್ನುವುದನ್ನು ವಿವರಿಸಿರುವುದಿಲ್ಲ. ಆದುದರಿಂದ ಆ.ಸ.ನೌಕರರ ಆಕ್ಷೇಪಣೆಗಳನ್ನು ಒಪ್ಪಲಾಗದ ಕಾರಣ, ಆಪಾದಿತ ಸರ್ಕಾರಿ

ನೌಕರರಾದ ನೀವು ಕರ್ತವ್ಯವನ್ನು ನಿಷ್ಠೆಯಿಂದ ಮಾಡಿಲ್ಲದಿರುವುದು ಕಂಡುಬಂದಿದ್ದರಿಂದ ಮತ್ತು ಈ ಕೃತ್ಯ ದುರ್ನಡತೆ ಎಂಬ ಪರಿಭಾಷೆಯಲ್ಲಿ ಬರುವುದರಿಂದ ಕರ್ನಾಟಕ ಸಿವಿಲ್ ಸೇವಾ (ನಡತೆ) 1966ರಡಿ ನಿಯಮ 3(1)(ii) ಮತ್ತು (iii)ರಡಿಯಲ್ಲಿ ದುರ್ವರ್ತನೆ ಮಾಡಿದ್ದೀರೆಂದು ಕಂಡು ಬಂದಿದ್ದರಿಂದ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957ರಡಿ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ಮತ್ತು ಗೌರವಾನ್ವಿತ ಉಪಲೋಕಾಯುಕ್ತರವರು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ ಮೇರೆಗೆ ಸರ್ಕಾರವು ಮೇಲೆ ಉಲ್ಲೇಖಿಸಿದ ಆದೇಶದಲ್ಲಿ ಇಲಾಖಾ ವಿಚಾರಣೆ ನಡೆಸಲು ಅನುಮತಿ ನೀಡಿರುತ್ತದೆ. ಅದರಂತೆ, ಗೌರವಾನ್ವಿತ ಉಪಲೋಕಾಯುಕ್ತರವರು, ಅಪರ ನಿಬಂಧಕರು, ವಿಚಾರಣೆಗಳು-11 ರವರಿಗೆ ವಿಚಾರಣೆ ನಡೆಸಿ ವರದಿಯನ್ನು ಸಲ್ಲಿಸಲು ನೇಮಕ/ನಾಮನಿರ್ದೇಶನ ಮಾಡಿರುತ್ತಾರೆ. ಉಲ್ಲೇಖ-3 ರ ಕಚೇರಿ ಟಿಪ್ಪಣಿಯ ಪ್ರಕಾರ ಸದರಿ ಇಲಾಖಾ ವಿಚಾರಣಾ ಕಡತವು ಎ.ಆರ್.ಇ-11 ರಿಂದ ಎ.ಆರ್.ಇ-16 ಶಾಖೆಗೆ ವರ್ಗಾವಣೆಗೊಂಡಿರುತ್ತದೆ. ಆದ್ದರಿಂದ ನಿಮ್ಮ ಮೇಲೆ ಈ ದೋಷಾರೋಪಣೆ.

10) ಈ ಮೇಲ್ಕಂಡ ದೋಷಾರೋಪಣೆ (Article of charge)ಅನ್ನು ಆ.ಸ.ನೌರವರುಗಳಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ, ಆ.ಸ.ನೌ.ರವರುಗಳು ಹಾಜರಾಗಿದ್ದು, ಅವರ ಪ್ರಥಮ ಮೌಖಿಕ ಹೇಳಿಕೆ (First Oral Statement) ನಿಯಮ 11(9) ಕೆಸಿಎಸ್ (ಸಿಸಿಎ) ರೂಲ್ಸ್ 1957ರಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರುಗಳು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

11) ಆ.ಸ.ನೌರವರುಗಳಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

12) ಆ.ಸ.ನೌ-1 ಮತ್ತು 2ರವರುಗಳು ತಮ್ಮ ಪ್ರತ್ಯೇಕವಾದ ಪ್ರತಿ ರಕ್ಷಣಾ ಹೇಳಿಕೆಗಳನ್ನು ಸಲ್ಲಿಸಿ, ತಮ್ಮ ವಿರುದ್ಧದ ಆರೋಪಗಳನ್ನು ನಿರಾಕರಿಸಿರುತ್ತಾರೆ. ಮುಂದುವರೆದು, ಈ ಆಸನೌರವರುಗಳು ವಿವರಿಸುವುದೇನೆಂದರೆ, ದೂರುದಾರರಾದ ಶ್ರೀ ಬಿ.ಎಂ.ಉಜ್ಜೀನಯ್ಯರವರು

ಸಂಡೂರು ತಾಲ್ಲೂಕು, ಬೊಮ್ಮಗಟ್ಟ ಗ್ರಾಮದ ಸರ್ವೇ ನಂ.591ರಲ್ಲಿ ದಾರಿ ಬಿಡಿಸಿಕೊಡಲು ಅರ್ಜಿ ಸಲ್ಲಿಸಿದ್ದು, ಸದರಿ ದೂರುದಾರರೇ ಸಾರ್ವಜನಿಕ ರಸ್ತೆಯನ್ನು ಒತ್ತುವರಿ ಮಾಡಿಕೊಂಡಿರುವುದಾಗಿ, ದಿನಾಂಕ 10/03/2015ರಂದು ಸದರಿ ದೂರುದಾರರಿಗೆ ದಿನಾಂಕ 18/03/2015ರ ಒಳಗೆ ಒತ್ತುವರಿ ಮಾಡಿದ ದಾರಿಯನ್ನು ತೆರವುಗೊಳಿಸಲು ತಿಳುವಳಿಕೆ ಪತ್ರವನ್ನು ಖುದ್ದು ಜಾರಿ ಮಾಡಿರುವುದಾಗಿ ಹೇಳಿರುತ್ತಾರೆ. ದಿನಾಂಕ 18/03/2015ರಂದು ಬೊಮ್ಮಗಟ್ಟ ಗ್ರಾಮಕ್ಕೆ ತಹಶೀಲ್ದಾರ್, ಉಪತಹಶೀಲ್ದಾರ್, ಕಂದಾಯ ನಿರೀಕ್ಷಕರು, ಗ್ರಾಮ ಲೆಕ್ಕಾಧಿಕಾರಿ ಮತ್ತು ಆರಕ್ಷಕ ಇಲಾಖಾಧಿಕಾರಿಗಳು ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ, ಸಾರ್ವಜನಿಕರು ಮತ್ತು ಗ್ರಾಮಸ್ಥರು ಡಾ: ನಿಂಗಪ್ಪ ಹಾಗೂ ಡಾ: ಪ್ರಸನ್ನ ಇವರುಗಳು ಆಶ್ರಯ ಮನೆಗಳಿಗಾಗಿ 3 ಎಕರೆ ಪ್ರದೇಶವನ್ನು ಬಿಟ್ಟುಕೊಟ್ಟಿರುವುದಾಗಿ, ಅಲ್ಲದೇ, 80×12 ಅಡಿ ಅಗಲದ ರಸ್ತೆಯನ್ನು ಆಶ್ರಯ ಕಾಲೋನಿ ಮನೆಗಳಿಗೆ, ಕೆರೆ ಅಂಗಳಕ್ಕೆ ಹೋಗುವುದಕ್ಕೆ ಹಾಗೂ ಹಲವಾರು ಜನರುಗಳಿಗೆ ತಮ್ಮ ತಮ್ಮ ಜಮೀನುಗಳಿಗೆ ಹೋಗಲು ಸದರಿ ದಾರಿಯು ಸೂಕ್ತ ಮತ್ತು ಅನುಕೂಲಕರವಾಗಿರುವುದಾಗಿ ತಿಳಿಸಿರುತ್ತಾರೆಂದು ಹೇಳಿರುತ್ತಾರೆ.

13) ದೂರುದಾರರು ಕೇಳಿರುವ ರಸ್ತೆ ಪಕ್ಕದಲ್ಲಿ, ಹಾಲಿ ಸರ್ಕಾರಿ ಶಾಲೆಯಿದ್ದು, ಈ ಜಾಗದಲ್ಲಿ ಟ್ರ್ಯಾಕ್ಟರ್ ಮತ್ತು ಇತರೆ ವಾಹನಗಳು ತಿರುಗಾಡುವುದರಿಂದ ಶಾಲಾ ಮಕ್ಕಳಿಗೆ ಪಾಠ ಪ್ರವಚನಗಳಿಗೆ ತೊಂದರೆ ಆಗುತ್ತದೆಂದೂ ಸಹ ಗ್ರಾಮಸ್ಥರು ತಿಳಿಸಿರುತ್ತಾರೆಂದು, ದೂರುದಾರರಿಗೆ ಖುದ್ದಾಗಿ ಗ್ರಾಮಸ್ಥರು ಮತ್ತು ತಹಶೀಲ್ದಾರ್‌ರವರು ಸ್ಥಳಕ್ಕೆ ಆಗಮಿಸುವಂತೆ ಮೊಬೈಲ್ ಮೂಲಕ ತಿಳಿಸಿದರೂ ಸಹ ದೂರುದಾರರು ಗೈರು ಹಾಜರಾಗಿರುತ್ತಾರೆಂದು ಹೇಳಿರುತ್ತಾರೆ. ಈ ಪ್ರಕರಣದಲ್ಲಿ ಸರ್ಕಾರಕ್ಕಾಗಲಿ ಹಾಗೂ ಸಾರ್ವಜನಿಕರಿಗಾಗಲೀ ಯಾವುದೇ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲವೆಂದು ಕಾರಣ, ಈ ಹಂತದಲ್ಲಿ ಈ ಪ್ರಕರಣವನ್ನು ಕೈಬಿಡುವಂತೆ ವಿನಂತಿಸಿರುತ್ತಾರೆ.

14) ಈ ವಿಚಾರಣೆಯಲ್ಲಿ, ಆ.ಸ.ನೌರವರುಗಳ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ ಶ್ರೀ.ಬಿ.ಎಂ.ಉಜ್ಜನಯ್ಯರವರನ್ನು ಪಿ.ಡಬ್ಲ್ಯು.1 ಎಂದು ಸಾಕ್ಷಿ ನುಡಿಸಿಕೊಂಡು, ನಿ.ಪಿ–1 ರಿಂದ ನಿ.ಪಿ–24ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. ಆ.ಸ.ನೌ–1

ರವರು ವಿಚಾರಣೆಯ ಮಧ್ಯಂತರ ಅವಧಿಯಲ್ಲಿ ಗೈರು ಹಾಜರಾಗಿದ್ದರಿಂದ **ಏಕತರ್ಫಿ** (exparte) ಎಂದು ಆದೇಶಿಸಲಾಗಿರುತ್ತದೆ. ಆ.ಸ.ನೌ–2ರವರ ದ್ವಿತೀಯ ಮೌಖಿಕ ಹೇಳಿಕೆ (Second Oral Statement)ಅನ್ನು ತೆಗೆದುಕೊಳ್ಳಲಾಗಿರುತ್ತದೆ.

15) ಆಸನೌ–2ರವರು ತಮ್ಮ ಪರವಾಗಿ ತಾನು ಡಿ.ಡಬ್ಲ್ಯು–1 ಎಂದು ಸಾಕ್ಷಿ ನುಡಿದಿದ್ದು, ಯಾವುದೇ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ.

16) ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಯವರ ವಾದವನ್ನು ಆಲಿಸಲಾಯಿತು. ಮತ್ತು ಆ.ಸ.ನೌ–2ರವರು ಸಲ್ಲಿಸಿರುವ ಲಿಖಿತ ವಾದಾಂಶವನ್ನು ಪರಿಶೀಲಿಸಲಾಯಿತು.

17) ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2**: ಆದೇಶವೇನು?

18) ವಾದವಿವಾದ ಆಲಿಸಿದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ:

**ಅಂಶ–1)** ಸಕಾರಾತ್ಮಕವಾಗಿ.

**ಅಂಶ–2)** ಅಂತಿಮ ಆದೇಶದಂತೆ.

## ಕಾರಣಗಳು

**19) ಅಂಶ–1:** ಈ ಪ್ರಕರಣದಲ್ಲಿ, ಆ.ಸ.ನೌ–1 ಮತ್ತು 2ರವರುಗಳ ವಿರುದ್ಧ ಆರೋಪಿಸಲಾದ ಆರೋಪವನ್ನು ರುಜುವಾತುಪಡಿಸಲು, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಪ್ರಕರಣದ ದೂರುದಾರರಾದ ಶ್ರೀ.ಬಿ.ಎಂ.ಉಜ್ಜನಯ್ಯರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷಿ ನುಡಿಸಿಕೊಂಡಿದ್ದು, ನಿ.ಪಿ–1 ರಿಂದ ನಿ.ಪಿ–24 ರವರೆಗಿನ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

**20)** **ನಿ.ಪಿ–1** ದಾಖಲೆಯು ಲಿಖಿತ ದೂರು ಇದ್ದು, **ನಿ.ಪಿ–2** ಮತ್ತು **ನಿ.ಪಿ–3** ಪ್ರಪತ್ರ–1 ಮತ್ತು ಪ್ರಪತ್ರ–2 ಇರುತ್ತದೆ. **ನಿ.ಪಿ–4** ದೂರುದಾರರು ದಿನಾಂಕ 19/09/2014ರಂದು ಆ.ಸ.ನೌ–1ರವರಿಗೆ ಈ ಅತಿಕ್ರಮಿಸಿದ ದಾರಿಯನ್ನು ಬಿಡಿಸಿಕೊಡಬೇಕೆಂದು ವಿನಂತಿಸಿದ ಮನವಿ ಪತ್ರದ ಜೆರಾಕ್ಸ್ ಪ್ರತಿ ಇದ್ದು, **ನಿ.ಪಿ–5** ಗ್ರಾಮಲೆಕ್ಕಾಧಿಕಾರಿಗಳು ಆ.ಸ.ನೌ–1ರವರಿಗೆ ದಿನಾಂಕ 27/09/2014ರಂದು ನೀಡಿದ ಸ್ಥಳತನಿಖಾ ವರದಿ ಇರುತ್ತದೆ. **ನಿ.ಪಿ–6** ಆ.ಸ.ನೌ–2ರವರು ದಿನಾಂಕ 07/10/2014ರಂದು ಆ.ಸ.ನೌ–1ರವರಿಗೆ ಈ ಬಗ್ಗೆ ನೀಡಿದ ವರದಿ ಇದ್ದು, **ನಿ.ಪಿ–7** ಆ.ಸ.ನೌ–1ರವರು ಸ್ಥಳೀಯ ಪೊಲೀಸರಿಗೆ ಸದರಿ ಅತಿಕ್ರಮಿಸಿದ ಕಾಂಪೌಂಡನ್ನು ತೆರವುಗೊಳಿಸಲು ಭದ್ರತೆ ನೀಡಲು ಕೋರಿಕೊಂಡ ಮನವಿ ಪತ್ರ ಇರುತ್ತದೆ. **ನಿ.ಪಿ–8** ದೂರುದಾರರು ದಿನಾಂಕ 20/10/2014ರಂದು ನಕ್ಷೆಯಲ್ಲಿರುವಂತೆ ರಸ್ತೆಯನ್ನು ಬಿಡಿಸಿಕೊಡಬೇಕೆಂದು ನೀಡಿದ ಮನವಿ ಪತ್ರದ ಪ್ರತಿ ಇರುತ್ತದೆ. **ನಿ.ಪಿ–9** ದೂರುದಾರರು ದಿನಾಂಕ 20/10/2014ರಂದು ನಕ್ಷೆಯಲ್ಲಿರುವಂತೆ ರಸ್ತೆಯನ್ನು ಬಿಡಿಸಿಕೊಡಬೇಕೆಂದು ಉಪವಿಭಾಗಾಧಿಕಾರಿಗಳಿಗೆ ನೀಡಿದ ಮನವಿ ಪತ್ರದ ಪ್ರತಿ ಇರುತ್ತದೆ. **ನಿಪಿ–10** ಉಪವಿಭಾಗಾಧಿಕಾರಿಗಳಿ ದಿನಾಂಕ 12/12/2014ರಂದು ಆ.ಸ.ನೌ–1ರವರಿಗೆ ನಕ್ಷೆಯಲ್ಲಿರುವಂತೆ ರಸ್ತೆಯನ್ನು ಬಿಡಿಸಿಕೊಡುವಂತೆ ಹೊರಡಿಸಿದ ಆದೇಶದ ಪ್ರತಿ ಇರುತ್ತದೆ. **ನಿಪಿ–11** ದಿನಾಂಕ 22/12/2014ರಂದು ಆ.ಸ.ನೌ–1ರವರು ನೀಡಿದ ನಡಾವಳಿಯ ಪ್ರತಿ ಇರುತ್ತದೆ. **ನಿಪಿ–12** ಜಂಟಿ ಸರ್ವೇ ನಕ್ಷೆ ಇದ್ದು, **ನಿಪಿ–13** ಮತ್ತು **ನಿಪಿ–14** ಒತ್ತುವರಿ ರಸ್ತೆ ಜಾಗವನ್ನು

ತೆರವುಗೊಳಿಸದೇ ಇರುವುದನ್ನು ತೋರಿಸಲು ಹಾಜರು ಮಾಡಿದ 2 ಫೋಟೋಗಳು, **ನಿಪಿ–15** ದಿನಾಂಕ 19/03/2015ರಂದು ದೂರುದಾರರು ಈ ಲೋಕಾಯುಕ್ತ ಸಂಸ್ಥೆಗೆ ಸಲ್ಲಿಸಿದ ಮನವಿ ಪತ್ರ ಮತ್ತು **ನಿಪಿ–16** ಸಿ.ಡಿ ಇರುತ್ತದೆ. **ನಿಪಿ–17** ಈ ದೂರುದಾರರು ಲೋಕಾಯುಕ್ತ ಸಂಸ್ಥೆಗೆ ಸಲ್ಲಿಸಿದ ಪ್ರತ್ಯುತ್ತರ, **ನಿಪಿ–18** ರಿಂದ **ನಿಪಿ–21**ರವರೆಗಿನ ದಾಖಲೆಗಳು ರಸ್ತೆಯ ಜಾಗವನ್ನು ಗುರುತಿಸಿದ್ದಾಗಿಯೂ ಕಂದಾಯ ದಾಖಲೆಗಳಲ್ಲಿ ಖಾತೆದಾರರ ಹೆಸರು ಮುಂದುವರೆದಿರುವುದನ್ನು ತೋರಿಸಲು ಹಾಜರು ಪಡಿಸಿದ ಕಂದಾಯ ದಾಖಲೆಗಳು, **ನಿಪಿ–22** ಖಾತೆದಾರರ ಹೆಸರಿಗೆ ಇರುವ ಪಹಣಿ ಪತ್ರಿಕೆ, **ನಿಪಿ–23** ಆ.ಸ.ನೌ–1ರವರು ದೂರುದಾರರಿಗೆ ದಿನಾಂಕ 10/03/2015ರಂದು ನೀಡಿದ ನೋಟೀಸಿನ ಪ್ರತಿ, **ನಿಪಿ–24** ದೂರುದಾರರು ದಿನಾಂಕ 18/03/2015ರಂದು ತನ್ನ ಹೆಂಡತಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುತ್ತಿದ್ದ ಬಗ್ಗೆ ನೀಡಿದ ಆಸ್ಪತ್ರೆ ದಾಖಲೆಗಳಾಗಿರುತ್ತವೆ.

21) ಆ.ಸ.ನೌರವರ ವಿರುದ್ಧ ರಚಿಸಲಾದ ಆರೋಪವನ್ನು ರುಜುವಾತುಪಡಿಸಲು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರನ್ನು ಪಿ.ಡಬ್ಲ್ಯು–1 ಎಂದು ಸಾಕ್ಷಿ ನುಡಿಸಿಕೊಂಡಿದ್ದು, ಅವರು ಈ ಕೆಳಕಂಡಂತೆ ನುಡಿದಿರುತ್ತಾರೆ.

> **"ನಾನು ಸರ್ಕಾರಿ ಶಾಲೆಯ ಜಾಗ ಮತ್ತು ರಸ್ತೆಯ ಜಾಗ ಒತ್ತುವರಿಯಾಗಿರುವುದನ್ನು ತೆರವು ಮಾಡುವಂತೆ ಆ.ಸ.ನೌ–1ರವರಿಗೆ ದಿನಾಂಕ 19/09/2014ರಂದು ಅರ್ಜಿ ನೀಡಿದ್ದೆ. ಆ.ಸ.ನೌ–1ರವರು ಒತ್ತುವರಿಯಾಗಿರುವುದನ್ನು ತೆರವುಗೊಳಿಸುವಂತೆ ಆ.ಸ.ನೌ–2ರವರಿಗೆ ಮತ್ತು ಸ್ಥಳೀಯ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್‌ರವರಿಗೆ ನಿರ್ದೇಶಿಸಿದ್ದರು. ಆ.ಸನೌ–2ರವರು ಯಂತ್ರೋಪಕರಣದೊಂದಿಗೆ ತೆರವುಗೊಳಿಸಲು ಸ್ಥಳಕ್ಕೆ ಹೋದಾಗ, ಸ್ಥಳೀಯ ಶಾಸಕರಾದ ಶ್ರೀ ಇ.ತುಕಾರಾಂರವರು ಆ.ಸ.ನೌ–2ರವರಿಗೆ ಮೊಬೈಲ್‌ಗೆ ಫೋನ್ ಮಾಡಿ ತೆರವು ಮಾಡದಂತೆ ಹೇಳಿರುತ್ತಾರೆ. ಆ.ಸ.ನೌ–1ರವರೇ ಆ.ಸ.ನೌ–2ರವರಿಗೆ ಫೋನ್‌ನಲ್ಲಿ ಮಾತನಾಡಿ ತೆರವು ಮಾಡದಂತೆ ಮೌಖಿಕವಾಗಿ ತಿಳಿಸಿರುತ್ತಾರೆ."**

"ತದನಂತರ, ನಾನು ಸದರಿ ಜಾಗವನ್ನು ತೆರವುಗೊಳಿಸುವಂತೆ ಉಪವಿಭಾಗಾಧಿಕಾರಿಗಳಿಗೆ ದಿನಾಂಕ 20/10/2014ರಂದು ಮತ್ತು 30/10/2014ರಂದು ಮನವಿ ನೀಡಿರುತ್ತೇನೆ. ದಿನಾಂಕ 12/12/2014ರಂದು ಉಪವಿಭಾಗಾಧಿಕಾರಿಗಳು ಆದೇಶ ಹೊರಡಿಸಿ, ತಹಶೀಲ್ದಾರ್‌ರವರಿಗೆ ಕಾಲಮಿತಿಯೊಳಗೆ ಅತಿಕ್ರಮಿಸಿರುವುದನ್ನು ತೆರವುಗೊಳಿಸುವಂತೆ ಹೇಳಿರುತ್ತಾರೆ. ತಹಶೀಲ್ದಾರ್ ಮತ್ತು ಕಂದಾಯ ನಿರೀಕ್ಷಕರು ಹಾಗೂ ಸರ್ವೇಯರ್ ಸೇರಿ ಜಂಟಿ ಸರ್ವೇ ಮಾಡಿ, ನಕಾಶೆ ತಯಾರಿಸಿರುತ್ತಾರೆ. ಸದರಿ ನಕಾಶೆಯಲ್ಲಿ ರಸ್ತೆ ಇರುವುದನ್ನು ನಮೂದಿಸಿರುತ್ತಾರೆ."

"ಆ.ಸ.ನೌ–1ರವರು ದಿನಾಂಕ 10/03/2015ರಂದು ಕಂದಾಯ ನಿರೀಕ್ಷಕರಿಗೆ, ಗ್ರಾಮ ಲೆಕ್ಕಾಧಿಕಾರಿಗೆ, ಸರ್ವೇಯರ್‌ರವರಿಗೆ ಮತ್ತು ಗುಡೆಕೋಟೆ ಪೋಲೀಸ್ ಸ್ಟೇಷನ್‌ಗೆ ನೋಟೀಸ್ ನೀಡಿರುತ್ತಾರೆ. ದಿನಾಂಕ 18/03/2015ರಂದು ಆ.ಸ.ನೌ–1ರವರು ನನಗೆ ಫೋನ್‌ನಲ್ಲಿ ಸ್ಥಳಕ್ಕೆ ಬರುವಂತೆ ತಿಳಿಸಿದರು. ನಾನು ಆ ದಿನ ನನ್ನ ಹೆಂಡತಿಗೆ ಆರೋಗ್ಯ ಸರಿ ಇಲ್ಲದೇ ಇದ್ದುದರಿಂದ, ಸಂಡೂರು ಸಾರ್ವಜನಿಕ ಆಸ್ಪತ್ರೆಯಲ್ಲಿದ್ದೆ. ನಂತರ, ಆ.ಸ.ನೌ–1ರವರು ನನಗೆ ಪುನ: ದಿನಾಂಕ 20/03/2015ರಂದು ನೋಟೀಸ್ ನೀಡಿರುತ್ತಾರೆ. ಆದಾಗ್ಯೂ ಸದರಿ ಅತಿಕ್ರಮಿಸಿದ ಜಾಗವನ್ನು ಇಲ್ಲಿಯವರೆಗೂ ತೆರವುಗೊಳಿಸಿರುವುದಿಲ್ಲ."

22) ಈ ಮೇಲ್ಕಂಡಂತೆ ತಮ್ಮ ಮುಖ್ಯ ವಿಚಾರಣೆಯಲ್ಲಿ, ದೂರಿಗೆ ಪೂರಕವಾಗುವಂತೆ ಸಾಕ್ಷ್ಯ ನುಡಿದಿದ್ದು, ಚೋರನೂರು ಹೋಬಳಿ ಬೊಮ್ಮಗಟ್ಟ ಗ್ರಾಮದ ಸರ್ವೇ ನಂ.591ರಲ್ಲಿ, ನಿಪಿ–12ರ ನಕಾಶೆಯಲ್ಲಿ ಕಾಣಿಸಿರುವಂತೆ ಅತಿಕ್ರಮಿಸಿರುವುದನ್ನು ತೆರವುಗೊಳಿಸಿ ಸಾರ್ವಜನಿಕ ಓಡಾಟಕ್ಕೆ ಮುಕ್ತವನ್ನಾಗಿಸಲು ಉಪವಿಭಾಗಾಧಿಕಾರಿಗಳು ಆದೇಶಿಸಿದ್ದರೂ ಸಹ, ಈ ಆ.ಸ.ನೌ–1 ಮತ್ತು ಆ.ಸ.ನೌ–2ರವರು ಸೂಕ್ತ ಕಾನೂನು ಕ್ರಮ ಜರುಗಿಸದೇ ಅನವಶ್ಯಕ ಕಾರಣಗಳನ್ನು ನೀಡಿ ಮುಂದೂಡಿರುತ್ತಾರೆಂಬುದು ಸ್ಪಷ್ಟವಾಗಿರುತ್ತದೆ. 'ಅತಿಕ್ರಮದಾರರಾದ ಡಾ: ಪ್ರಸನ್ನರವರ

ಪೂರ್ವಜರು ಆಶ್ರಯ ಯೋಜನೆಗೆ ಸರ್ವೇ ನಂ.591ರಲ್ಲಿ 3 ಎಕರೆ ಜಮೀನು ಬಿಟ್ಟುಕೊಟ್ಟಿರುವುದರಿಂದ, ಈ ವಿವಾದಿತ ಅತಿಕ್ರಮಿಸಿದ ರಸ್ತೆಯ ಜಾಗವನ್ನು ತೆರವುಗೊಳಿಸಿರುವುದಿಲ್ಲವೆಂದು ಈ ಆ.ಸ.ನೌ–1 ಮತ್ತು ಆ.ಸ.ನೌ–2ರವರು ಹೇಳಿರುವ ಸಬೂಬು ಊರ್ಜಿತವಾಗಿರುವುದಿಲ್ಲ. ದೂರುದಾರರು ದಿನಾಂಕ 12/12/2014ರಂದು ಸಹಾಯಕ ಆಯುಕ್ತರು ಹೊರಡಿಸಿದ ಆದೇಶದ ಪ್ರತಿಯನ್ನು ನಿಪಿ–10 ಎಂದು ಗುರುತಿಸಿಕೊಂಡಿದ್ದು, ಸದರಿ ದಾಖಲೆಯಲ್ಲಿ ಆ.ಸ.ನೌ–1ರವರಿಗೆ ಕಾನೂನು ಪ್ರಕಾರ ಆದೇಶ ಹೊರಡಿಸಿ ನಕ್ಷೆಯಲ್ಲಿ ತೋರಿಸಿರುವ ಒತ್ತುವರಿಯನ್ನು ತೆರವುಗೊಳಿಸುವಂತೆ ಆದೇಶಿಸಿರುವುದು ಕಂಡುಬರುತ್ತದೆ. ಈ ಬಗ್ಗೆ ಆ.ಸ.ನೌ–1ರವರು ಸಹ ನಿಪಿ–11 ರಂತೆ ನಡಾವಳಿ ಮಾಡಿಕೊಂಡಿದ್ದು, ಅದರಲ್ಲಿ ಸರ್ವೇ ನಂ.591 ನಕಾಶೆಯಲ್ಲಿ ತೋರಿಸಿದ ಸರ್ಕಾರಿ ದಾರಿ ಇರುವುದನ್ನು ಮತ್ತು ಅದನ್ನು ಖಾತೆದಾರರು ಅತಿಕ್ರಮಿಸಿರುವುದನ್ನು ತೆರವುಗೊಳಿಸುವ ಬಗ್ಗೆ ಮತ್ತು ಸದರಿ ಜಾಗವನ್ನು ಸಾರ್ವಜನಿಕರಿಗೆ ಓಡಾಡಲು ಮುಕ್ತವಾಗಿಸಿ ದಾರಿಯನ್ನು ಕಲ್ಪಿಸುವಂತೆ ಮಾಡಿಕೊಂಡಿರುವ ಆದೇಶವಿರುವುದು ಕಂಡುಬರುತ್ತದೆ.

23) ಈ ಪ್ರಕರಣದಲ್ಲಿ, ಸಾರ್ವಜನಿಕ ರಸ್ತೆ ಜಾಗವನ್ನು ಅತಿಕ್ರಮಿಸಿಕೊಂಡಿರುವುದು ನಿರ್ವಿವಾದ. ಸದರಿ ಅತಿಕ್ರಮಣವನ್ನು ಈ ಆ.ಸನೌ–1 ಮತ್ತು 2ರವರು ತೆರವುಗೊಳಿಸುವ ಅಧಿಕಾರಿಗಳಿದ್ದಾಗಿಯೂ ಮತ್ತು ಈ ಬಗ್ಗೆ ಸಹಾಯಕ ಆಯುಕ್ತರು ಆದೇಶ ಹೊರಡಿಸಿದ್ದಾಗಿಯೂ, ಅತಿಕ್ರಮಣವನ್ನು ಸೂಕ್ತ ಸಮಯದಲ್ಲಿ ತೆರವುಗೊಳಿಸದೇ ದುರ್ನಡತೆ ತೋರಿ ಕರ್ತವ್ಯಲೋಪವೆಸಗಿರುವುದು ಕಂಡುಬರುತ್ತದೆ. ದೂರುದಾರರಾದ ಪಿ.ಡಬ್ಲ್ಯು–1ರವರ ಮುಖ್ಯ ವಿಚಾರಣೆಯಲ್ಲಿನ ಸಾಕ್ಷ್ಯವನ್ನು ಪ್ರಶ್ನಿಸಿರುವುದಿಲ್ಲ. ಆ.ಸ.ನೌ–1ರವರು ಹಾಜರಾಗಿ ರಕ್ಷಣಾ ಹೇಳಿಕೆ ಸಲ್ಲಿಸಿದ್ದಾಗಿಯೂ ವಿಚಾರಣೆಯಲ್ಲಿ ಗೈರುಹಾಜರಾಗಿ ಏಕತರ್ಫಿಯಾಗಿರುತ್ತಾರೆ. ಆ.ಸ.ನೌ–2ರವರು ಡಿಡಬ್ಲ್ಯು–1 ಎಂದು ಮೌಖಿಕ ಸಾಕ್ಷ್ಯ ನುಡಿದಿದ್ದು, ತಮ್ಮ ಮೌಖಿಕ ಸಾಕ್ಷ್ಯದ ಮುಖ್ಯ ವಿಚಾರಣೆಯಲ್ಲಿ ಸದರಿ ಅತಿಕ್ರಮಣವನ್ನು ತೆರವುಗೊಳಿಸಲು ಸ್ಥಳಕ್ಕೆ ಹೋದಾಗ, ಅತಿಕ್ರಮಣದಾರರು ತಡೆಯೊಡ್ಡಿದ್ದರಿಂದ ತನಗೆ ಸಾಧ್ಯವಾಗಿರುವುದಿಲ್ಲವೆಂದು ಹೇಳಿರುತ್ತಾರೆ. ಅಲ್ಲದೇ, ಸ್ಥಳೀಯ ಶಾಸಕರು ತನಗೆ ಪೋನ್ ಮುಖಾಂತರ ವಾಪಸ್ಸ್ ಬರುವಂತೆ ತಿಳಿಸಿದ್ದಾಗಿ ಮತ್ತು ಆ.ಸ.ನೌ–1ರವರು ಸಹ ತನಗೆ ಫೋನ್ ಮುಖಾಂತರ ತೆರವುಗೊಳಿಸುವುದನ್ನು

ಸ್ಥಗಿತಗೊಳಿಸಿ ವಾಪಸ್ಸ್ ಬರುವಂತೆ ಮೌಖಿಕವಾಗಿ ಮೊಬೈಲ್‌ನಲ್ಲಿ ತಿಳಿಸಿದ್ದರಿಂದ ತಾನು ತೆರವುಗೊಳಿಸದೇ ಅಲ್ಲಿಂದ ವಾಪಸ್ಸ್ ಬಂದಿರುವುದಾಗಿ ಹೇಳಿರುತ್ತಾರೆ. ಅಲ್ಲದೇ, ಸದರಿ ಅತಿಕ್ರಮಿಸಿದ ಜಾಗ ಈಗಲೂ ಅದೇ ಸ್ಥಿತಿಯಲ್ಲಿ ಇದೇ ಎಂಬುದನ್ನು ಪಾಟೀ ಸವಾಲಿನಲ್ಲಿ ಒಪ್ಪಿಕೊಂಡಿರುತ್ತಾರೆ.

24) ಆ.ಸ.ನೌ–1 ಮತ್ತು ಆ.ಸ.ನೌ–2ರವರು ಸಾರ್ವಜನಿಕ ಓಡಾಟದ ರಸ್ತೆಯನ್ನು ಸಾರ್ವಜನಿಕರಿಗೆ ಬಿಡುಗಡೆ ಮಾಡಿಕೊಡುವಲ್ಲಿ ಸಂಪೂರ್ಣ ವಿಫಲರಾಗಿರುತ್ತಾರೆಂಬುದು ಕಂಡು ಬರುತ್ತದೆ. ಈ ಎಲ್ಲಾ ಅಂಶವನ್ನು ಪರಿಶೀಲಿಸಿದಾಗ ಈ ಆಸನೌರವರು ಸೂಕ್ತ ಸಮಯದಲ್ಲಿ ಅತಿಕ್ರಮದಾರರಿಗೆ ತಿಳುವಳಿಕೆ ಪತ್ರ ನೀಡಿದ್ದಾಗಿಯೂ, ಒತ್ತುವರಿ ಮಾಡಿರುವ ಸಾರ್ವಜನಿಕ ರಸ್ತೆಯನ್ನು ಸಾರ್ವಜನಿಕರ ಓಡಾಟಕ್ಕೆ ಅನುಕೂಲ ಮಾಡಿಕೊಡುವಲ್ಲಿ ಸಂಪೂರ್ಣ ವಿಫಲರಾಗಿರುತ್ತಾರೆ. ಅಲ್ಲದೆ, ಆ.ಸ.ನೌ–1ರವರು ದಿನಾಂಕ 30/09/2014ರಂದು ಸದರಿ ಅತಿಕ್ರಮಿಸಿ ಕಟ್ಟಿದ ಕಾಂಪೌಂಡನ್ನು ತೆರವುಗೊಳಿಸಲು ಆದೇಶಿಸಿದ್ದಾಗಿಯೂ, ಸದರಿ ರಸ್ತೆಯನ್ನು ಅತಿಕ್ರಮಿಸಿದವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವಲ್ಲಿಯೂ ವಿಫಲರಾಗಿರುತ್ತಾರೆ ಎಂಬುದು ಕಂಡು ಬರುತ್ತದೆ. ಹಾಗೂ ಈ ಆಸನೌರವರುಗಳು ಸದರಿ ಸಾರ್ವಜನಿಕ ರಸ್ತೆಯನ್ನು ಸಾರ್ವಜನಿಕರ ಉಪಯೋಗಕ್ಕೆ ಬಳಸಲು ಅವಕಾಶ ಮಾಡಿಕೊಡದೆ ವಿನಾಕಾರಣ ಕಾಲವಿಳಂಬ ಮಾಡಿರುತ್ತಾರೆ ಎಂಬುದು ಸಹ ಸಾಬೀತಾಗುತ್ತದೆ.

25) ಕಾರಣ, ಶಿಸ್ತು ಪ್ರಾಧಿಕಾರದವರು ಆ.ಸ.ನೌ ರವರುಗಳು ದುರ್ನಡತೆ ಮತ್ತು ಕರ್ತವ್ಯಲೋಪವೆಸಗಿರುವುದನ್ನು ರುಜುವಾತುಪಡಿಸುವಲ್ಲಿ ಯಶಸ್ವಿಯಾಗಿರುತ್ತಾರೆಂದು ನಿರ್ಣಯಿಸಲಾಗಿದೆ. **ಆಸನೌ–1 ರವರು ದಿನಾಂಕ 30/06/2015 ರಂದು ಹಾಗೂ ಆಸನೌ–2 ರವರು ದಿನಾಂಕ 30/04/2016 ರಂದು ನಿವೃತ್ತಿ ಹೊಂದಿರುತ್ತಾರೆ.** ಆ.ಸ.ನೌರವರುಗಳು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯಲೋಪವೆಸಗಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1)(ii) ರಿಂದ (iii) ರಡಿಯಲ್ಲಿ ಕರ್ತವ್ಯಲೋಪ ಮತ್ತು ದುರ್ನಡತೆ ಎಸಗಿರುವ ಹೆಚ್ಚಿನ **ಸಂಭವನೀಯತೆ**

(probabalities) ಕಂಡು ಬಂದಿರುತ್ತದೆ. **ಈ ಎಲ್ಲಾ ಕಾರಣಗಳಿಂದ ಅಂಶ ನಂ.1 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.**

**ಆದೇಶ**

*ಶಿಸ್ತು ಪ್ರಾಧಿಕಾರದವರು ಆಪಾದಿತ ಸರ್ಕಾರಿ ನೌಕರರಾದ* ***1)*** **ಶ್ರೀ ತಿಮ್ಮಯ್ಯ**, ತಹಶೀಲ್ದಾರ್, ಸಂಡೂರು ಹಾಗೂ **2) ಶ್ರೀ ಮಹಬೂಬ್ ಸಾಬ್,** ಕಂದಾಯ ನಿರೀಕ್ಷಕರು, ಚೋರನೂರು, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ *ರವರ ವಿರುದ್ಧ ಹೊರಿಸಲಾದ ಆರೋಪವನ್ನು* ***ರುಜುವಾತುಪಡಿಸಲಾಗಿದೆ*** *ಎಂದು ನಿರ್ಣಯಿಸಲಾಗಿದೆ.*

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ–2ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

21ನೇ ಜನವರಿ 2020

(ಸೆಲ್ವ ಕುಮಾರ್.ಸಿ)
ಅಪರ ನಿಬಂಧಕರು ವಿಚಾರಣೆಗಳು–16,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## PHERIST

| Sl. No. | Particulars of Documents | Page Nos. |
|---|---|---|
| **File 1** | Order Sheet File (Original). | 1-8 |
| **File 2** | **Documents containing :**<br>I. 12(3) report of Hon'ble Upalokayukta-II, dated: 26/09/2016 (xerox).<br>II.Government Order No. ಆರ್.ಡಿ 136 ಎಡಿಇ 2016, ಬೆಂಗಳೂರು, ದಿನಾಂಕ 26/07/2017. (xerox).<br>III. Nomination order No: Uplok-1/DE/961/2017 Bengaluru, dated: 28/08/2017 of Hon'ble Upalokayukta-I, Bangalore (Xerox) | 9-12<br>13-15<br>16-17 |
| | IV. Served copy of Articles of charges dtd.9/5/2019, 5 pages (Original) | 18-24 |
| | V. First Oral Statement of DGO-1 dtd:14/6/2019,(original) | 25 |
| | VI. First Oral Statement of DGO-2 dtd:14/6/2019,(original) | 26 |
| | VII. Written statement of DGO-1 dt.31/7/2019, pages (original) | 27-28 |
| | VIII. Written statement of DGO-2 dt.31/7/2019, (original) | 29-30 |
| | IX. Second oral statement of DGO-2 dt.04/12/2019, (original) | 31 |
| | VIII. Written arguments of DGO-2,dt.16/1/2020 (original) | 32-33 |
| **File 3** | **Witness examined on behalf of the Disciplinary Authority** | |
| | **PW-1**: Sri.B.M.Ujjaniah, dt.1/10/2019 (original) | 34-37 |
| | **Documents marked on behalf Disciplinary Authority (Ex.P1 to Ex.P.24)** | |
| | **Ex.P-1:** Complaint of Sri. Sri.B.M.Ujjaniah (original) | 38-39 |
| | **Ex.P-2:** Complaint of Sri.B.M.Ujjaniah in form No.I, dt.13/2/2015 (original) | 40-41 |
| | **Ex.P-3:** Complaint of Sri.B.M.Ujjaniah in form No.II dt.13/2/2015 (original) | 42 |
| | **Ex.P-4:** Copy of letter of complainant to Tahsildar, Sandur dt.19/9/2014 (Xerox) | 43 |
| | **Ex.P-5:** Copy of letter of village accountant to Tahsildar, Sandur(Xerox) | 44 |

| | | |
|---|---|---|
| | **Ex.P-6**: Copy of letter of Revenue Inspector to Tahsildar, Sandur (Xerox) | 45 |
| | **Ex.P.7:** Copy of letter of Tahsildar, Sandur addressed to Police sub Inspector, Gudekote Police station dt.30/09/2014 (Xerox) | 46 |
| | **Ex.P.8:** Copy of letter of complainant Ujjaniah to Assistant Commissioner, Bellary (Xerox) | 47 |
| | **Ex.P.9**: Copy of letter of complainant Ujjanaih to Asst.Commissioner, Bellary dt.30/10/2014(Xerox) | 48 |
| | **Ex.P.10**: Copy of letter of Assistant Commissioner to Tahsildar, Sandur Dt:12/12/2014 (Xerox) | 49 |
| | **Ex.P.11:** Copy of proceedings of Tahsildar, Sandur dt:22/12/2014 ( Xerox) | 50 |
| | **Ex.P.12:** Copy of sketch (Xerox) | 51 |
| | **Ex.P.13 and 14:** Copy of photographs (original) | 52 |
| | **Ex.P.15**: Copy of letter of complainant, Ujjanaiah dt.19/3/2015 addressed to Karnataka Lokayukta(original) | 53 |
| | **Ex.P.16: O**ne original CD | 54 |
| | **Ex.P.17: C**opy of letter of complainant, Ujjanaiah dt.27/7/2015 to Karnataka Lokayukta(original) | 55-57 |
| | **Ex.P.18 to 21:**Copy of mutation registers (original) | 58-61 |
| | **Ex.P.22**: Copy of records of rights (original) | 62 |
| | **Ex.P.23:** Copy of memo of Tahsildar, Sandur(xerox) | 63 |
| | **Ex.P.24:** Copy of Slip of Taluk General Hospital, Sandur (xerox) | 64 |
| **File 4** | **Witness examined on behalf of the DGO** | |
| | **DW-1:** Sri. Mehaboob Sab dt.7/1/2020, (Original) | 65-67 |

**(SELVA KUMAR.C)**
Additional Registrar Enquiries-16
Karnataka Lokayukta,
Bangalore.